ಶ್ರೀ ಸಿ. ಬೈರೇಗೌಡ : ಡಿಸೆಂಬರ್ ಒಳಗಾಗಿ ಸರಬರಾಜು ಮಾಡುತ್ತೇವೆಂದು ಹೇಳಿದರು, ಆಗಲೇ ಉತ್ತರದಲ್ಲಿ 48 ಗಂಟೆಯೊಳಗೆ ಟ್ರಾನ್ಸ್‌ಫಾರ್ಮರ್ ಸರಬರಾಜು ಮಾಡುತ್ತೇವೆಂದು ಹೇಳಿದರು. ಯಾವುದು ನಿಜ?

ಅಧ್ಯಕ್ಷರು : ಎಷ್ಟು ಬೇಗ ಸಾಧ್ಯವೋ ಮಾಡಿ.

ಶ್ರೀ ಸಿ. ಬೈರೇಗೌಡ : ಎಷ್ಟು ಬೇಗ ಸಾಧ್ಯವೋ ಅಂದರೆ ಬೆಳೆಗಳು ಒಣಗಿ ಹೋಗುತ್ತವೆ. ಯಾರನ್ನೂ ಅದು ಕಾಯುವುದಿಲ್ಲ.

ಅಧ್ಯಕ್ಷರು : ಮಳೆಗಾಲದಲ್ಲಿ ಪರವಾಗಿಲ್ಲ. ಸಮ್ಮರ್‌ನಲ್ಲಿ ಕಷ್ಟವಾಗುತ್ತದೆ. ಬೇಗ ಮಾಡುತ್ತಾರೆ ಬಿಡಿ.

ಚಿಕ್ಕಮಗಳೂರು ಜಿಲ್ಲೆಯ ಪೋಲೀಸ್ ಠಾಣೆ

518 - ಶ್ರೀ ನೀಲಕಂಠಪ್ಪ ಬಿ.ಆರ್. (ತರೀಕೆರೆ) : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಚಿಕ್ಕಮಗಳೂರು ಜಿಲ್ಲೆಯಲ್ಲಿ ಎಷ್ಟು ಪೋಲೀಸ್ ಠಾಣೆಗಳು ಇವೆ?*

ಆ) *1999-2000 ಮತ್ತು 2001ನೇ ಸಾಲಿನಲ್ಲಿ ಈವರೆವಿಗೂ ದಾಖಲಾದ ಮೊಕದ್ದಮೆಗಳು ಎಷ್ಟು?*

ಇ) *ಈ ದಾಖಲಾದ ಮೊಕದ್ದಮೆಗಳಲ್ಲಿ ಎಷ್ಟು ಪ್ರಕರಣಗಳಲ್ಲಿ (ಆರೋಪ ಪಟ್ಟಿ) ಚಾರ್ಜ್ ಶೀಟ್ ಹಾಕಲಾಗಿದೆ?*

ಈ) *ಈ ಎರಡು ವರ್ಷಗಳಲ್ಲಿ ಎಷ್ಟು ಮೊಕದ್ದಮೆಗಳಲ್ಲಿ "ಬಿ" ರಿಪೋರ್ಟ್ ಹಾಕಲಾಗಿದೆ? (ವಿವರ ನೀಡುವುದು)*

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು) :

ಅ) ಚಿಕ್ಕಮಗಳೂರು ಜಿಲ್ಲೆಯಲ್ಲಿ ಒಟ್ಟು 25 ಪೋಲೀಸ್ ಠಾಣೆಗಳಿವೆ.

ಆ) 1999ನೇ ಸಾಲಿನಲ್ಲಿ (1.1.99ರಿಂದ 31.12.99 ರವರೆಗೆ) 3067 ಪ್ರಕರಣಗಳು ಹಾಗೂ 2000ನೇ ಸಾಲಿನಲ್ಲಿ (ದಿ 1.1.2000ರಿಂದ 31.10.2000ರವರೆಗೆ) 2484 ಪ್ರಕರಣಗಳು ದಾಖಲಾಗಿವೆ.

ಇ) 1999ನೇ ಸಾಲಿನಲ್ಲಿ 2621 ಪ್ರಕರಣಗಳಲ್ಲಿ ಹಾಗೂ 2000ನೇ ಸಾಲಿನಲ್ಲಿ ಒಟ್ಟು 1760 ಪ್ರಕರಣಗಳಲ್ಲಿ ಚಾರ್ಜ್ ಶೀಟ್ ಹಾಕಲಾಗಿದೆ.

ಈ) 1999ನೇ ಸಾಲಿನಲ್ಲಿ 127 ಪ್ರಕರಣಗಳಲ್ಲಿ ಹಾಗೂ 2000ನೇ ಸಾಲಿನಲ್ಲಿ 101 ಪ್ರಕರಣಗಳಲ್ಲಿ "ಬಿ" ರಿಪೋರ್ಟ್ ಸಲ್ಲಿಸಲಾಗಿದೆ.

ಶ್ರೀ ಬಿ.ಆರ್. ನೀಲಕಂಠಪ್ಪ : ಅಧ್ಯಕ್ಷರೇ, ಚಿಕ್ಕಮಗಳೂರು ಜಿಲ್ಲೆಯಲ್ಲಿ 25 ಪೋಲೀಸ್ ಠಾಣೆಗಳಿದ್ದು ತರೀಕೆರೆಯಲ್ಲಿ ಗ್ರಾಮಾಂತರ ಮತ್ತು ಟೌನ್ ಪೋಲೀಸ್ ಠಾಣೆ ಮತ್ತು ಸಬ್ ಜೈಲಿನ ಕಟ್ಟಡಕ್ಕೆ ಶತಮಾನಕ್ಕೂ ಹೆಚ್ಚು ಕಾಲ ಆಗಿದೆ. ಒಂದು ತಿಂಗಳ ಹಿಂದೆ ಮಳೆಗಾಲದಲ್ಲಿ ಸಬ್ ಜೈಲು ಬಿದ್ದಿದೆ. ನಗರ ಮತ್ತು ಗ್ರಾಮಾಂತರ ಠಾಣೆಗಳೂ ಬೀಳುವ ಪರಿಸ್ಥಿತಿ ಇದೆ. ಅದಕ್ಕೆ ನಡುವೆ ಗೂಟ ನಿಲ್ಲಿಸಲಾಗಿದೆ. ಅದಕ್ಕೆ ಸೂಕ್ತ ಸ್ಥಳಾವಕಾಶಕ್ಕೆಂದು ಒಂದು ಎಕರೆ ಭೂಮಿ ನೀಡಲೂ ಮುಂದೆ ಬಂದಿದ್ದಾರೆ. ಈ ಕಟ್ಟಡಗಳು ಬೀಳುವ ಮುನ್ನ ಹೊಸ ಕಟ್ಟಡ ಕಟ್ಟಲು ಸರ್ಕಾರ ಯೋಜನೆಯೇನಾದರೂ ಹೊಂದಿದೆಯೇ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅಧ್ಯಕ್ಷರೇ, ಅವರು ಕಟ್ಟಡದ ಬಗ್ಗೆ ಪ್ರಶ್ನೆ ಕೇಳಿದ್ದರೆ ಮಾಹಿತಿ ಒದಗಿಸುತ್ತಿದ್ದೆವು. ಆದರೆ ಬೇರೇನೆ ಕೇಳಿದ್ದಾರೆ. ಈಗಾಗಲೇ ಪೋಲೀಸ್ ಠಾಣೆ ಮತ್ತು ಜಿಲ್ಲಾ ಕಛೇರಿಗಳನ್ನು ಕಟ್ಟುವುದಕ್ಕೆಂದು 120 ಕೋಟಿ ರೂಪಾಯಿಗಳನ್ನು ಹುಡ್ಕೊದಿಂದ ಸಾಲ ಎತ್ತಿ, ಎಲ್ಲೆಲ್ಲಿ ಸ್ಟೇಶನ್ಸ್ ಇಲ್ಲ, ಎಲ್ಲೆಲ್ಲಿ ದುಸ್ಥಿತಿಯಲ್ಲಿವೆ ಅಂತಹ ಕಡೆ ಹೊಸ ಸ್ಟೇಶನ್ ಕಟ್ಟಿಸಬೇಕೆಂದಿದ್ದೇವೆ. ಎರಡನೆಯದು, ಕೇಂದ್ರ ಸರ್ಕಾರ ಕೂಡ ಈ ಸಾರಿ ನಮಗೆ ಕೊಡುವ ಹಣದ ಮೊತ್ತ ಹೆಚ್ಚು ಮಾಡಿದೆ. ಅವರು 75 ಕೋಟಿ ರೂಪಾಯಿಗಳನ್ನೂ ಕೊಡುತ್ತಿದ್ದು ನಾವು ಮ್ಯಾಚಿಂಗ್ ಗ್ರಾಂಟ್ ಎಂದು 75 ಕೋಟಿ ರೂಪಾಯಿಗಳನ್ನು ಸೇರಿಸುತ್ತಿದ್ದೇವೆ. ಆ ಹಣದಿಂದ ಪೋಲೀಸ್ ಠಾಣೆ ನಿರ್ಮಾಣ, ವೆಹಿಕಲ್ಸ್, ಎಕ್ವಿಪ್‌ಮೆಂಟ್ಸ್ ಸ್ಥಿತಿ ಸುಧಾರಿಸಬಹುದು. ಹುಡ್ಕೋದ ಯೋಜನೆ ಅಡಿಯಲ್ಲಿ ತರೀಕೆರೆ ಪೋಲೀಸ್ ಸ್ಟೇಶನ್ ಕಟ್ಟಿಸುವ ವ್ಯವಸ್ಥೆ ಮಾಡುತ್ತೇವೆ. ಆದರೆ ಸಬ್‌ಜೈಲು ಬಗ್ಗೆ ಅವರು ಬೇರೆ ಪ್ರಶ್ನೆ ಹಾಕಲಿ. ಅದು ಪ್ರಿಸನ್ಸ್‌ಗೆ ಬಂದಂಥಾದ್ದು. ಅದು ಅತ್ಯಂತ ಕೆಟ್ಟ ಸ್ಥಿತಿಯಲ್ಲಿದ್ದರೆ ಅದನ್ನೂ ತರಿಸಿಕೊಂಡು ಪರಿಶೀಲಿಸಿ ಮುಂದಿನ ಬಜೆಟ್‌ನಲ್ಲಿ ಏನಾದರೂ ಒಂದು ಪ್ರಾವಿಶನ್ ಮಾಡುತ್ತೇವೆ.

ಶ್ರೀ ಬಿ.ಆರ್. ನೀಲಕಂಠಪ್ಪ : ಸಬ್ ಜೈಲು, ಪೋಲೀಸ್ ಠಾಣೆಗಳೆಲ್ಲ ಒಂದೇ ಕಟ್ಟಡದಲ್ಲು ಒಂದೊಂದೇ ಬೀಳುತ್ತಿದೆ. ಈ ಮಳೆಗಾಲದಲ್ಲಿ ಸಬ್‌ಜೈಲು ಬಿದ್ದಿದೆ, ಠಾಣೆಯ ಗೋಡೆಗಳು ಬಿದ್ದಿವೆ. ಅತಿವೃಷ್ಟಿ ಯೋಜನೆಯಡಿ ರಿಪೇರಿ ಕೆಲಸವನ್ನೂ ತೆಗೆದುಕೊಂಡಿದ್ದಾರೆ. ಈಗ ಹೇಗೂ ನಾವು ಪ್ರತ್ಯೇಕ ಭೂಮಿ ಕೊಡುತ್ತಿದ್ದೇವೆ, ಅಲ್ಲಿ ಸಬ್‌ಜೈಲು ಠಾಣೆಗಳನ್ನು ಪ್ರತ್ಯೇಕವಾಗೇ ವ್ಯವಸ್ಥೆ ಮಾಡಿಸುತ್ತೀರಾ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮೊದಲೇ ಹೇಳಿದಂತೆ 120 ಕೋಟಿ ರೂಪಾಯಿಯಲ್ಲಿ ನಾನ್ ರೆಸಿಡೆನ್ಸಿಯಲ್ ಕಟ್ಟಡ ಕೈಗೊಳ್ಳುತ್ತಿದ್ದೇವೆ. ಅಲ್ಲಿಂದ ತಾವೂ ಎಸ್ಟಿಮೇಟ್ ಮಾಡಿ ಕಳಿಸಿದರೆ ನಮ್ಮ ಪೋಲೀಸ್ ಹೌಸಿಂಗ್ ಕಾರ್ಪೊರೇಷನ್ನಿನಿಂದ ಆ ಕೆಲಸ ಕೈಗೆತ್ತಿಕೊಳ್ಳುತ್ತೇವೆ.

ಭದ್ರಾ ಅಚ್ಚುಕಟ್ಟು ಪ್ರದೇಶದಲ್ಲಿ ನೀರಾವರಿಯಾಗದೆ ಇರುವ ಭೂಮಿ

519 - ಶ್ರೀ ರವೀಂದ್ರನಾಥ್ ಎಸ್.ಎ. (ಮಾಯಕೊಂಡ) : ಮಾನ್ಯ ಬೃಹತ್ ಮತ್ತು ಮಧ್ಯಮ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಭದ್ರಾ ಅಚ್ಚುಕಟ್ಟು ಪ್ರದೇಶದಲ್ಲಿ ನೀರಾವರಿಯಾಗದೆ ಇರುವ ಒಟ್ಟು ಭೂಮಿ ಎಷ್ಟು?

ಆ) ಇಲ್ಲಿಯವರೆವಿಗೂ ನೀರನ್ನು ಕೊಡದಿರಲು ಕಾರಣವೇನು?